ಕರ್ನಾಟಕ ಸರ್ಕಾರ

(ತೋಟಗಾರಿಕೆ ಇಲಾಖೆ)

ಸಂಖ್ಯೆ:ತೋಇ:ಆ:ಸಿ:ವಿ3:57:2017-18

ತೋಟಗಾರಿಕೆ ಆಯುಕ್ತರ ಕಛೇರಿ,
ಲಾಲ್ ಬಾಗ್, ಬೆಂಗಳೂರು-04.
ದಿನಾಂಕ:15-07-2017.

"ಕಛೇರಿ ಆದೇಶ"

ವಿಷಯ: 2017-18ನೇ ಸಾಲಿನ ಅಟೆಂಡರ್ / ಸೇವಕ ವೃಂದದ ನೌಕರರ ವರ್ಗಾವಣೆ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 22 ಸೇನೌವ 13 ದಿನಾಂಕ:07.06.2013.
2. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 12 ಸೇನೌವ 17 ದಿನಾಂಕ:30.06.2017.
3. ಮಾನ್ಯ ತೋಟಗಾರಿಕೆ ಸಚಿವರು ರವರ ಟಿಪ್ಪಣಿ ಸಂಖ್ಯೆ:ತೋ:ಕೃಮಾಸ:217:17-18 ದಿ:14-7-17.

--**--

ಉಲ್ಲೇಖ(1), (2) ಮತ್ತು (3)ರನ್ವಯ 2017-18ನೇ ಸಾಲಿನ ತೋಟಗಾರಿಕೆ ಇಲಾಖೆಯ ಈ ಕೆಳಕಂಡ ಅಡೆಂಡರ್ / ಸೇವಕ ವೃಂದದ ನೌಕರರನ್ನು ಅವರ ಹೆಸರಿನ ಮುಂದೆ ನಮೂದಿಸಿದ ಕಛೇರಿಗೆ ಈ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ವರ್ಗಾಯಿಸಿ ಈ ಮೂಲಕ ನೇಮಿಸಿ ಆದೇಶಿಸಲಾಗಿದೆ.

| ಕ್ರ.ಸಂ | ನೌಕರರ ಹೆಸರು/ ಪದನಾಮ ಮತ್ತು ಕಛೇರಿ | ವರ್ಗಾಯಿಸಿ ನೇಮಿಸಿದ ಕಛೇರಿ |
|---|---|---|
| 1. | ಶ್ರೀಮತಿ ರಂಗಮ್ಮ<br>ಅಟೆಂಡರ್<br>ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಹಾಸನ, ಹಾಸನ ಜಿಲ್ಲೆ. | ಅಟೆಂಡರ್,<br>ತೋಟಗಾರಿಕೆ ಆಯುಕ್ತರ ಕಛೇರಿ, ಲಾಲ್ ಬಾಗ್, ಬೆಂಗಳೂರು ಅಧೀನ ಖಾಲಿ ಇರುವ ಸೇವಕ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ನೇಮಿಸಿದೆ. ಹಾಗೂ ಇವರ ಸೇವೆಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ, ಗ್ರಂಥಾಲಯ, ಲಾಲ್ ಬಾಗ್, ಬೆಂಗಳೂರು ಇವರ ವಶಕ್ಕೆ ನೀಡಲಾಗಿದೆ. |
| 2. | ಶ್ರೀ ಸಿ.ಎನ್.ದಿನೇಶ್<br>ಸೇವಕ<br>ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಹಾಸನ, ಹಾಸನ ಜಿಲ್ಲೆ. | ಸೇವಕ<br>ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಹಾಸನ ಅಧೀನ ಶ್ರೀಮತಿ ರಂಗಮ್ಮ, ಅಟೆಂಡರ್ ಇವರ ವರ್ಗಾವಣೆಯಿಂದ ತೆರವಾದ ಅಟೆಂಡರ್ ಹುದ್ದೆಯನ್ನು ಸೇವಕ ಹುದ್ದೆಗೆ ಕೆಳದರ್ಜೆಗೆ ಇಳಿಸಿ ನೇಮಿಸಿದೆ. |

1. ಮೇಲ್ಕಂಡ ನೌಕರರ ವರ್ಗಾವಣೆಯು ಕೋರಿಕೆ ವರ್ಗಾವಣೆಗಳಾಗಿರುತ್ತದೆ. ಇವರುಗಳು ಯಾವುದೇ ವರ್ಗಾವಣೆ ಪ್ರವಾಸ ಭತ್ಯೆ ಮತ್ತು ಸೇರುವಿಕೆ ಕಾಲಕ್ಕೆ ಅರ್ಹರಿರುವುದಿಲ್ಲ.
2. ಮೇಲ್ಕಂಡ ನೌಕರರನ್ನು ಅವರ ಕಛೇರಿಯಿಂದ ಹಾಗೂ ಕೆಲಸ ಮಾಡುತ್ತಿರುವ ಹುದ್ದೆಗಳಿಂದ ತಕ್ಷಣ ಬಿಡುಗಡೆ ಮಾಡುವುದು ಹಾಗೂ ಬಿಡುಗಡೆಗೊಳಿಸಿದ / ಕರ್ತವ್ಯಕ್ಕೆ ಹಾಜರಾದ ಬಗ್ಗೆ ಅವರ ಮೇಲಾಧಿಕಾರಿಗಳು ಆಯುಕ್ತರ ಕಛೇರಿಗೆ ತಪ್ಪದೇ ವರದಿ ಮಾಡತಕ್ಕದ್ದು.

ಒ/ಲ

ಆಯುಕ್ತರು.

ಪ್ರತಿಯನ್ನು:-

1. ಕಛೇರಿ ಆದೇಶ ಪುಸ್ತಕಕ್ಕೆ.

ಪು.ತಿ.ನೋ.

2. ಮಾನ್ಯ ತೋಟಗಾರಿಕೆ ಸಚಿವರು, ಕರ್ನಾಟಕ ಸರ್ಕಾರ, ಸಚಿವಾಲಯ, ಕೊಠಡಿ ಸಂಖ್ಯೆ:342, ವಿಧಾನ ಸೌಧ, ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
3. ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
4. ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಹಾಸನ / ಮೈಸೂರು / ಮಂಡ್ಯ.
5. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಹಾಸನ / ಮಂಡ್ಯ.
6. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್) ಮೈಸೂರು.
7. ಸಹಾಯಕ ತೋಟಗಾರಿಕೆ ಅಧಿಕಾರಿ, ಗ್ರಂಥಾಲಯ ವಿಭಾಗ, ಆಯುಕ್ತರ ಕಛೇರಿ, ಲಾಲ್ ಬಾಗ್, ಬೆಂಗಳೂರು.
8. ಸಂಬಂಧಪಟ್ಟ ನೌಕರರಿಗೆ ಸೂಕ್ತ ಮಾರ್ಗದಲ್ಲಿ.
9. ಕಛೇರಿ / ಹೆಚ್ಚುವರಿ ಪ್ರತಿ.